**ಅಂಗನವಾಡಿಗಳಲ್ಲಿ ಬೆಲ್ಲದ ಬದಲು ಸಕ್ಕರೆಯ ಉಪಯೋಗದ ಬಗ್ಗೆ**

560 (4951) : ಶ್ರೀ ಗುರುಸ್ವಾಮಿ ಸಿ (ಚಾಮರಾಜನಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗನವಾಡಿ ಮತ್ತು ಇತರರಿಗೆ ಕೊಡುತ್ತಿರುವ ಆಹಾರ ತಯಾರಿಕೆಗಾಗಿ ಬೆಲ್ಲವನ್ನು ಉಪಯೋಗಿಸುತ್ತಿದ್ದು, ಕೆಲ ತಿಂಗಳುಗಳಿಂದ ಬೆಲ್ಲದ ಬದಲಿಗೆ ಸಕ್ಕರೆಯನ್ನು ಇಲಾಖೆಯು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಈ ಬದಲಾವಣೆಗೆ ಕಾರಣವೇನು; ತಿಳಿಸುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ)ಆ) 2003–04ನೇ ಸಾಲಿನಿಂದ ಅಮಲ್ಗೈಸ್ ಯುಕ್ತ ಶಕ್ತಿಯುತ ಆಹಾರದಲ್ಲಿ ಬೆಲ್ಲದ ಬದಲಿಗೆ ಸಕ್ಕರೆಯನ್ನು ಉಪಯೋಗಿಸಬೇಕೆಂದು ದಿನಾಂಕ:28.2.2002 ರಂದು ನಡೆದ ತಜ್ಞರ ಸಭೆಯಲ್ಲಿ ಕೈಗೊಂಡ ನಿರ್ಧಾರದಂತೆ ಸಕ್ಕರೆಯನ್ನು ಉಪಯೋಗಿಸಲಾಗುತ್ತಿದೆ.

ಎ.ಆರ್.ಇ.ಎಫ್ ನಲ್ಲಿ ಬೆಲ್ಲವನ್ನು ಉಪಯೋಗಿಸುವುದರಿಂದ ಬೆಲ್ಲದಲ್ಲಿ ಕೆಲವು ಸಲ ಕಸ ಕಡ್ಡಿ ಕೂಡಿಕೊಂಡಿರುವುದರಿಂದ ಆಹಾರದ ಗುಣಮಟ್ಟದಲ್ಲಿ ಪರಿಣಾಮವಾಗುತ್ತಿರುವುದು ಹಾಗೂ ಇದರಿಂದ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುಬಹುದೆಂಬ ಉದ್ದೇಶದಿಂದ ಸಕ್ಕರೆಯನ್ನು ಉಪಯೋಗಿಸಲಾಗುತ್ತಿದೆ. ಅಕ್ಕಿ ಸಿಹಿ ಪೊಂಗಲ್ ತಯಾರಿಸಲು ಬೆಲ್ಲವನ್ನು ಉಪಯೋಗಿಸಲಾಗುತ್ತಿದೆ.

**ಆಳಂದ ಸಕ್ಕರೆ ಕಾರ್ಖಾನೆಯ ಕಾರ್ಮಿಕರ ವೇತನ ಪಾವತಿ ಮಾಡುವ ಬಗ್ಗೆ**

561 (4838) : ಶ್ರೀ ಗುತ್ತೇದಾರ್ ಸುಭಾಶ್ ರುಕ್ಮಯ್ಯ (ಆಳಂದ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಳಂದ ಸಕ್ಕರೆ ಕಾರ್ಖಾನೆಯ ಕಾಮಿಕರ ಸಂಬಳವನ್ನು ಹಲವು ತಿಂಗಳಿನಿಂದ ಪಾವತಿ ಮಾಡಿರುವುದಿಲ್ಲ. ಇದನ್ನು ಯಾವಾಗ ಪಾವತಿ ಮಾಡಲಾಗುವುದು;

ಆ) ರೈತರ ಕಬ್ಬಿನ ಬಿಲ್ ಎಷ್ಟಿದೆ; ಅದನ್ನು ಯಾವಾಗ ಸಂದಾಯ ಮಾಡಲಾಗುವುದು;

ಇ) ಸಕ್ಕರೆ ಉತ್ಪಾದನೆಯಿಂದ ಬಂದಿರುವ ಹಣವನ್ನು ಯಾವುದಕ್ಕಾಗಿ ಉಪಯೋಗಿಸಿದ್ದಾರೆ; ವಿವರ ನೀಡುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಆಳಂದ ಸಹಕಾರ ಸಕ್ಕರೆ ಕಾರ್ಖಾನೆಯ ಕಾರ್ಮಿಕರಿಗೆ ಸೆಪ್ಟೆಂಬರ್–2002ರಿಂದ ಇಲ್ಲಿಯವರೆವಿಗೆ ವೇತನ ಪಾವತಿ ಮಾಡಿರುವುದಿಲ್ಲ. ಜಿಲ್ಲಾಧಿಕಾರಿಗಳ ನಿರ್ದೇಶನ ಹಾಗೂ ಆಡಳಿತ ಮಂಡಳಿಯ ಸಭೆಯ ತೀರ್ಮಾನದಂತೆ ಸರ್ಕಾರದಿಂದ ಬಿಡುಗಡೆಯಾಗಬೇಕಾದ ಮೃದು ಸಾಲದಲ್ಲಿ ರೂ. 50.00 ಲಕ್ಷಗಳು ಪಾವತಿಸಲು ಕ್ರಮವಿಡಲಾಗುತ್ತಿದೆ.

ಆ) ರೈತರ ಹಿಂದಿನ ಬಾಕಿ ರೂ. 3.92 ಕೋಟಿ ಬಾಲ್ತಿ ಹಂಗಾಮಿನ ಬಾಕಿ ರೂ. 2.03 ಕೋಟಿ ಒಟ್ಟು ರೂ. 5.95 ಕೋಟಿ ಬಾಕಿ ಇರುತ್ತದೆ. ಸರ್ಕಾರದಿಂದ ರೂ. 3.00 ಕೋಟಿ ಮೃದು ಸಾಲ ಬಿಡುಗಡೆಯಾದ ನಂತರ ಮಂಜೂರಾತಿ ಪತ್ರಕ್ಕನುಗುಣವಾಗಿ ಪಾವತಿಗೆ ಕ್ರಮವಿಡಲಾಗುವುದು. ಬೀದರ್ ಡಿಸಿಸಿ ಬ್ಯಾಂಕ್‌ನಿಂದ ಒತ್ತೆ ಸಾಲ ಪಡೆಯಲು ಸಹ ಕ್ರಮವಿಡಲಾಗುವುದು.